ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ವಿವಿಪ/ಅಸಾಮಾನ್ಯ/370/2022–23 ದಿನಾಂಕ: 12.04.2022

ಗೆ,

ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾಲಯ,
ಬೆಂಗಳೂರು

ಮಾನ್ಯರೆ

**ವಿಷಯ: ದಿನಾಂಕ: 08.04.2022 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.**

***

ದಿನಾಂಕ: 08.04.2022 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು–560 001 ರಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 4.18 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ,
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ:ಬೆಂ.ನ.ವಿ/ವಿವಿಪ/ಅಸಾಮಾನ್ಯ/ 370 /2022-23 ದಿನಾಂಕ: 12.04.2022.

ದಿನಾಂಕ 08.04.2022 ರಂದು ಮಧ್ಯಾಹ್ನ 12.00 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು– 560001 ಇಲ್ಲಿ ಜರುಗಿದ ವಿದ್ಯಾವಿಷಯಕ ಪರಿಷತ್ತಿನ ಅಸಾಮಾನ್ಯ ಸಭೆಯ ನಡವಳಿಗಳು.

ಹಾಜರಾದ ಸದಸ್ಯರು:

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ | ಸಭಾಧ್ಯಕ್ಷರು |
| 2. | ಪ್ರೊ. ಎಂ ಚಿಕ್ಕಮುನಿಯಪ್ಪ | ಸದಸ್ಯರು |
| 3. | ಡಾ. ಶಿಂಟಿ ಆಂಟನಿ | ಸದಸ್ಯರು |
| 4. | ಶ್ರೀ. ಕೆ ಶಿವಣ್ಣ | ಸದಸ್ಯರು |
| 5. | ಡಾ. ಗುರುನಾಥರಾವ್ ವೈದ್ಯ | ಸದಸ್ಯರು |
| 6. | ಡಾ. ಅನೇಸಿಯಾ | ಸದಸ್ಯರು |
| 7. | ಶ್ರೀ. ಕೆ. ಎಂ. ಮಹೇಶ್ | ಸದಸ್ಯರು |
| 8. | ಶ್ರೀ. ಎಂ ಸತೀಶ್ | ಸದಸ್ಯರು |
| 9. | ಡಾ. ಮೊಹಮ್ಮದ್ ಸುಹೇಲ್ ಇಕ್ಬಾಲ್ | ಸದಸ್ಯರು |
| 10. | ಡಾ. ಎಸ್. ಎನ್. ವೆಂಕಟೇಶ್ | ಸದಸ್ಯರು |
| 11. | ಶ್ರೀ. ಸಿ. ಎಂ. ನವೀನ್ ಕುಮಾರ್ | ಸದಸ್ಯರು |
| 12. | ಡಾ. ವಿಜಯಾನಂದ ಎಸ್ | ಸದಸ್ಯರು |
| 13. | ಡಾ. ಸುಪ್ರೀತ್ ಕಿತ್ತನಕೆರೆ | ಸದಸ್ಯರು |
| 14. | ಡಾ. ಎಂ. ಪಾಂಡುರಂಗಪ್ಪ | ಸದಸ್ಯರು |
| 15. | ಡಾ. ಎಂ. ಮುನಿರಾಜು | ಸದಸ್ಯರು |
| 16. | ಡಾ. ವಿ. ಗಾಯತ್ರಿ | ಸದಸ್ಯರು |
| 17. | ಡಾ. ಎಸ್. ಹರಿಪ್ರಸಾದ್ | ಸದಸ್ಯರು |
| 18. | ಡಾ. ಕೆ. ಶಿವಶಂಕರ | ಸದಸ್ಯರು |
| 19. | ಡಾ. ವಿ.ಆರ್ ದೇವರಾಜ್ | ಸದಸ್ಯರು |
| 20. | ಡಾ. ಎನ್ ನರಸಿಂಹಮೂರ್ತಿ | ಸದಸ್ಯರು |

| | | |
|---|---|---|
| 21. | ಶ್ರೀ ಆತ್ಮ ಹಿರೇಮಠ | ಸದಸ್ಯರು |
| 22. | ಪ್ರೊ. ಬಿ. ರಮೇಶ್<br>ಕುಲಸಚಿವರು ಮೌಲ್ಯಮಾಪನ) | ಸದಸ್ಯರು |
| 23. | ಶ್ರೀ. ರಘು ಜಿ. ಪಿ<br>ವಿತ್ತಾಧಿಕಾರಿಗಳು | ಸದಸ್ಯರು |
| 24. | ಶ್ರೀ. ಸಿ. ಎನ್ ಶ್ರೀಧರ್<br>ಕುಲಸಚಿವರು | ಸದಸ್ಯ<br>ಕಾರ್ಯದರ್ಶಿಗಳು |

ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರನ್ನು ಸ್ವಾಗತಿಸಿದ ನಂತರ ಕಾರ್ಯಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

ವಿಷಯ ಸಂಖ್ಯೆ 1: **ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಥಮ ವಾರ್ಷಿಕ ಘಟಿಕೋತ್ಸವದಲ್ಲಿ 2018–21 ಅವಧಿಗೆ ಸ್ನಾತಕ ವ್ಯಾಸಂಗ ಪೂರ್ಣಗೊಳಿಸಿ ಉತ್ತೀರ್ಣರಾಗಿರುವ ಮತ್ತು 2018–20 ಹಾಗೂ 2019–21 ನೇ ಅವಧಿಗೆ ಸ್ನಾತಕೋತ್ತರ ವ್ಯಾಸಂಗ ಪೂರ್ಣಗೊಳಿಸಿ ಉತ್ತೀರ್ಣರಾಗಿ ಆಯಾಯ ಪದವಿಗಳನ್ನು ಪಡೆಯಲು ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಗಳನ್ನು ಅನುಮೋದಿಸುವ ಬಗ್ಗೆ.**

*ಪರಾಮರ್ಶಕ ಟಿಪ್ಪಣಿ:*

ವಿಶ್ವವಿದ್ಯಾಲಯದ ಪ್ರಥಮ ವಾರ್ಷಿಕ ಘಟಿಕೋತ್ಸವ ದಿನಾಂಕ 11.04.2022 ರಂದು ನಡೆಯಲಿದೆ. ಈ ಘಟಿಕೋತ್ಸವದಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಪದವಿ ಸ್ವೀಕರಿಸಲು ಅರ್ಹರಾದ ವಿದ್ಯಾರ್ಥಿಗಳ ಪಟ್ಟಿ ಹಾಗೂ ಈ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಪ್ರಥಮ ರ್‍ಯಾಂಕ್/ಚಿನ್ನದ ಪದಕ ಮತ್ತು ನಗದು ಬಹುಮಾನ ವಿಜೇತರ ಪಟ್ಟಿಗಳನ್ನು ವಿಶ್ವವಿದ್ಯಾನಿಲಯದ ಪರಿನಿಯಮಾವಳಿ ಅಧ್ಯಾಯ 15 ಅನುಚ್ಛೇದ 15.1 ರ ಪ್ರಕಾರ ಪರಿಗಣಿಸಿ ಅನುಮೋದಿಸಲು ವಿದ್ಯಾವಿಷಯಕ ಪರಿಷತ್ತಿನ ಸಭೆಯಲ್ಲಿ ಮಂಡಿಸಲಾಗಿದೆ.

2018–20 ಮತ್ತು 2019–2021ರಲ್ಲಿ ಪ್ರವೇಶ ಪಡೆದ ಸ್ವಾಯತ್ತ ಕಾಲೇಜುಗಳ ವಿದ್ಯಾರ್ಥಿಗಳು ಸೇರಿ ಸ್ನಾತಕೋತ್ತರ ವಿದ್ಯಾರ್ಥಿಗಳ 2 ತಂಡ ಆಯಾ ಕೋರ್ಸುಗಳನ್ನು ಪೂರ್ಣಗೊಳಿಸಿ ಆಯಾಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಪದವಿ ಪಡೆಯಲು ಅರ್ಹರಾದ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಅದರ ಸಾರಾಂಶ ಕೆಳಗಿನಂತಿದೆ.

**Abstract of Post Graduate Students (Including Autonomous Colleges)**
**2018–20 and 2019–21**

| Arts | Science | Commerce | Education | Total |
|---|---|---|---|---|
| 1369 | 2932 | 8191 | 36 | 12528 |

2018–21 ರ ಅವಧಿಗೆ, ಸ್ವಾಯತ್ತ ಕಾಲೇಜುಗಳ ವಿದ್ಯಾರ್ಥಿಗಳು ಸೇರಿ, ಸ್ನಾತಕ ವ್ಯಾಸಂಗ ಪೂರ್ಣಗೊಳಿಸಿ ಆಯಾಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಪದವಿ ಪಡೆಯಲು ಅರ್ಹರಾಗಿರುವ ವಿದ್ಯಾರ್ಥಿಗಳ ಪಟ್ಟಿಯನ್ನು ಸಿದ್ದಪಡಿಸಲಾಗಿದೆ. ಅದರ ಸಾರಾಂಶ ಕೆಳಗಿನಂತಿದೆ.

**Abstract of Under Graduate Students (Including Autonomous Colleges)**
**2018-21**

| Arts | Science | Commerce | Education | Total |
|---|---|---|---|---|
| 2723 | 7179 | 16881 | 2457 | 29240 |

ಮೇಲೆ ತಿಳಿಸಿದ ಅಭ್ಯರ್ಥಿಗಳ ಅರ್ಹತಾ ಪಟ್ಟಿಗಳನ್ನು ವಿದ್ಯಾವಿಷಯಕ ಪರಿಷತ್ತಿನ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

***ವಿವರಣೆ:***

ಕುಲಪತಿಗಳು ಎಲ್ಲ ಸದಸ್ಯರಿಗೆ ಹಾರ್ದಿಕ ಸ್ವಾಗತ ಕೋರಿ, ದಿನಾಂಕ. 11.04.2022 ರಂದು ಜರುಗಲಿರುವ ವಿಶ್ವವಿದ್ಯಾನಿಲಯದ ಪ್ರಥಮ ವಾರ್ಷಿಕ ಘಟಿಕೋತ್ಸವದ ಸಿದ್ಧತೆಗಳ ವಿವರಗಳನ್ನು ಸಭೆಗೆ ತಿಳಿಸಿದರು. ಕುಲಾಧಿಪತಿಗಳು ಘಟಿಕೋತ್ಸವದಲ್ಲಿ ಭಾಗವಹಿಸುತ್ತಿದ್ದು, ಇದು ಸರ್ಕಾರದ ಶಿಷ್ಟಾಚಾರಗಳ ಪ್ರಕಾರ ಜರುಗಬೇಕಾದ ಕಾರ್ಯಕ್ರಮವಾಗಿರುತ್ತದೆ. ಕಾರಣ ಇನ್ನೊಂದು ಸಲ ಕಾರ್ಯಕ್ರಮದ ನಿಯಮಾಚರಣೆಯ ಪ್ರಕಾರ ರಿಹರ್ಸಲ್ ಮಾಡಲು ಭಾನುವಾರ 10.04.2022 ರಂದು ಬೆಳಿಗ್ಗೆ 9.30 ಗಂಟೆಗೆ ಎಲ್ಲ ಸದಸ್ಯರು ಆಗಮಿಸಬೇಕೆಂದು ಕೋರಿದರು.

ಘಟಿಕೋತ್ಸವದ ದಿವಸ ಕೂಡ ಎಲ್ಲ ಸದಸ್ಯರು ಬೆಳಿಗ್ಗೆ 9.30 ಗಂಟೆಗೆ ಉಪಸ್ಥಿತರಿದ್ದು, ಘಟಿಕೋತ್ಸವ ವಸ್ತ್ರಧಾರಣೆ ಮಾಡಿ ಸಿದ್ದರಿರಲು ತಿಳಿಸಿದರು. 9.45 ಕ್ಕೆ ಮಾನ್ಯ ಉನ್ನತ ಶಿಕ್ಷಣ ಸಚಿವರು, ಮುಖ್ಯ ಅತಿಥಿಗಳು ಮತ್ತು ಗೌರವ ಪದವಿ ಪುರಸ್ಕೃತರು ಆಗಮಿಸಲಿದ್ದಾರೆ. ಬೆಳಿಗ್ಗೆ 10.15 ಗಂಟೆಗೆ ಗೌರವಾನ್ವಿತ ಕುಲಾಧಿಪತಿಗಳು ಆಗಮಿಸಲಿದ್ದು, ತಕ್ಷಣದಿಂದ ಕ್ಷಣಗಣನೆ ಪ್ರಾರಂಭವಾಗುತ್ತದೆ. ಕಾರಣ 10.00 ಕ್ಕೆ ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ ಸದಸ್ಯರೊಂದಿಗೆ ಭಾವಚಿತ್ರ ತೆಗೆಸುವುದರೊಂದಿಗೆ ಘಟಿಕೋತ್ಸವ ಮೆರವಣಿಗೆ ಪ್ರಾರಂಭವಾಗಲಿದ್ದು. ಸದಸ್ಯರು ಕ್ಲುಪ್ತವಾಗಿ ಮೆರವಣಿಗೆ ಸಾಲಿನಲ್ಲಿ ಸೇರಿಕೊಂಡು ನಿಗದಿತ ಸಮಯದಲ್ಲಿ ಮೆರವಣಿಗೆ ಪ್ರಾರಂಭವಾಗಲು ಸಹಕರಿಸಬೇಕು ಎಂದು ತಿಳಿಸಿದರು. ಎಲ್ಲ ಸದಸ್ಯರ ಸಹಕಾರ ಹಾಗೂ ಸಹಯೋಗದಿಂದ, ಈ ಐತಿಹಾಸಿಕ ಪ್ರಥಮ ಘಟಿಕೋತ್ಸವವನ್ನು ಯಶಸ್ವಿಯಾಗಿ ನೆರವೇರಿಸುವ ವಿಶ್ವಾಸವಿದೆ ಎಂದು ತಿಳಿಸಿದರು.

ನಂತರ ಕುಲಸಚಿವರು (ಮೌಲ್ಯಮಾಪನ) ರವರಿಗೆ ವಿವರಗಳನ್ನು ನೀಡಲು ತಿಳಿಸಿದರು.

ಕುಲಸಚಿವರು (ಮೌಲ್ಯಮಾಪನ) ರವರು ಘಟಿಕೋತ್ಸವದಲ್ಲಿ ಪದವಿ ಪಡೆಯುವ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸಿ, 2018-19 ರಲ್ಲಿ ಸ್ನಾತಕ ವ್ಯಾಸಂಗಕ್ಕೆ ಪ್ರವೇಶ ಪಡೆದು ವ್ಯಾಸಂಗ ಪೂರ್ಣಗೊಳಿಸಿದ ಮತ್ತು 2018-19 ಮತ್ತು 2019-20 ರಲ್ಲಿ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆದು ವ್ಯಾಸಂಗ ಪೂರ್ಣಗೊಳಿಸಿ ಉತ್ತೀರ್ಣರಾದ ವಿದ್ಯಾರ್ಥಿ / ವಿದ್ಯಾರ್ಥಿನಿಯರ ವಿವರಗಳನ್ನು ಸಭೆಗೆ ಒದಗಿಸಿದರು.

ಒಟ್ಟು 41,768 ವಿದ್ಯಾರ್ಥಿ/ವಿದ್ಯಾರ್ಥಿನಿಯರು ಈ ಘಟಿಕೋತ್ಸವದಲ್ಲಿ ಪದವಿ ಪಡೆಯಲಿದ್ದು ಅವುಗಳಲ್ಲಿ ವಿದ್ಯಾರ್ಥಿನಿಯರು 26,945 ಮತ್ತು ವಿದ್ಯಾರ್ಥಿಗಳ 14,823 ಇರುತ್ತಾರೆ. ಶೇಕಡಾವಾರು 64.51% ವಿದ್ಯಾರ್ಥಿನಿಯರು ಮತ್ತು 35.41% ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಮಹಿಳಾ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉನ್ನತ ಶಿಕ್ಷಣ ರಂಗದಲ್ಲಿ ಪಾಲ್ಗೊಂಡಿರುವುದು ಹೆಮ್ಮೆಯ ಸಂಗತಿ ಎಂದು ಹೇಳಿದರು.

ಈ ಘಟಿಕೋತ್ಸವದಲ್ಲಿ ವಿಶ್ವವಿದ್ಯಾನಿಲಯದಿಂದ 77 ಮತ್ತು ದಾನಿಗಳು ಸ್ಥಾಪಿಸಿರುವ 7 ಹೀಗೆ ಒಟ್ಟು 84 ಚಿನ್ನದ ಪದಕಗಳನ್ನು ವಿದ್ಯಾರ್ಥಿಗಳು ಪಡೆಯಲ್ಲಿದ್ದು, ಮುಂದಿನ ದಿನಗಳಲ್ಲಿ ದಾನಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಹೇಳಿದರು.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಥಮ ವಾರ್ಷಿಕ ಘಟಿಕೋತ್ಸವದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳನ್ನು ಪಡೆಯಲು ಅರ್ಹರಾದ ಅಭ್ಯರ್ಥಿಗಳ ಪಟ್ಟಿಗಳಿಗೆ ಇಂದು ಜರುಗಿದ ಸಿಂಡಿಕೇಟ್ ಸಭೆ ಅನುಮೋದನೆ ನೀಡಿದ್ದು, ಸದರಿ ಪಟ್ಟಿಗಳಿಗೆ ವಿದ್ಯಾವಿಷಯಕ ಪರಿಷತ್ ಸಭೆ ಅನುಮೋದನೆ ನೀಡಬೇಕೆಂದು ವಿನಂತಿಸಿದರು.

ಸದಸ್ಯರಾದ ಡಾ. ಎನ್ ನರಸಿಂಹಮೂರ್ತಿಯವರು ಅಭ್ಯರ್ಥಿಗಳ ಪಟ್ಟಿಯನ್ನು ಸದಸ್ಯರಿಗೆ ನೀಡಬೇಕಾಗಿತ್ತು ಮತ್ತು ರ್‍ಯಾಂಕ್ ವಿಜೇತರ ಪಟ್ಟಿಯನ್ನು ಸಹ ಕೊಡಬೇಕಾಗಿತ್ತು ಎಂದು ಹೇಳಿದರು. ಇದಲ್ಲದೆ ಸ್ವಾಯತ್ತ ಕಾಲೇಜುಗಳ ವಿದ್ಯಾರ್ಥಿಗಳ ಹೆಸರು ಪಟ್ಟಿಯಲ್ಲಿ ಸೇರಿದ್ದು, ಸ್ವಾಯತ್ತ ಕಾಲೇಜುಗಳು ಪೂರಕ ಪರೀಕ್ಷೆಗಳನ್ನು ಜರುಗಿಸುವ ಪರಿಪಾಠ ಇಟ್ಟುಕೊಂಡಿದ್ದಾರೆ ವಿಶ್ವವಿದ್ಯಾನಿಲಯದಲ್ಲಿ ಇಲ್ಲದೇ ಇರುವ ಪೂರಕ ಪರೀಕ್ಷೆಯ ಪದ್ಧತಿ ಸ್ವಾಯತ್ತ ಕಾಲೇಜುಗಳು ಅನುಸರಿಸಿದ್ದು ಸರಿಯಲ್ಲ ಎಂದು ಹೇಳಿದರು. ಹಾಗೆಯೆ ಒಂದು ಸ್ವಾಯತ್ತ ಕಾಲೇಜು ಯು.ಜಿ.ಸಿ ಮನ್ನಣೆಯ ನವೀಕರಣವಿಲ್ಲದೆ ಮುಂದುವರೆಯುತ್ತಿದ್ದು, ಆ ಕುರಿತು ಪರಿಶೀಲಿಸಬೇಕೆಂದು ತಿಳಿಸಿದರು ಮತ್ತು ಗೌರವ ಡಾಕ್ಟರೇಟ್ ಪದವಿ ನೀಡುತ್ತಿರುವ ಗಣ್ಯರ ಹೆಸರುಗಳನ್ನು ಈ ಸಭೆಗೆ ತಿಳಿಸಬೇಕೆಂದು ಕೋರಿದರು.

ಕುಲಸಚಿವರು (ಮೌಲ್ಯಮಾಪನ) ರವರು ವಿವರಣೆ ನೀಡಿ, ಬೆಂಗಳೂರು ಹಾಗೂ ಇನ್ನಿತರ ವಿಶ್ವವಿದ್ಯಾನಿಲಯಗಳು ಪಾಲಿಸಿರುವ ಪದ್ಧತಿಯನ್ನು ಅನುಸರಿಸಲಾಗಿದೆ. ಅರ್ಹ ಅಭ್ಯರ್ಥಿಗಳ ಪಟ್ಟಿಯಲ್ಲಿ ರ್‍ಯಾಂಕ್ ವಿಜೇತರ ಹೆಸರು ಒಳಗೊಂಡಿದ್ದು, ಸದರಿ ದಾಖಲೆಯನ್ನು ಸಭೆಯ ಮುಂದೆ ಮಂಡಿಸಲಾಗಿದೆ. ಆಸಕ್ತ ಸದಸ್ಯರು ಅವುಗಳನ್ನು ಪರಿಶೀಲಿಸಬಹುದೆಂದು ತಿಳಿಸಿದರು. ರ್‍ಯಾಂಕ್ ವಿಜೇತರ ಪಟ್ಟಿಯನ್ನು ಸದಸ್ಯರಿಗೆ ಘಟಿಕೋತ್ಸವದ ದಿವಸ ನೀಡಲಾಗುವುದು ಎಂದು ತಿಳಿಸಿದರು.

ಸ್ವಾಯತ್ತ ಮಹಾವಿದ್ಯಾಲಯಗಳು ಪೂರಕ ಪರೀಕ್ಷೆಗಳನ್ನು ನಡೆಸಿರುವ ಮತ್ತು ಯು.ಜಿ.ಸಿ ಮನ್ನಣೆ ನವೀಕರಣದ ಕುರಿತು ವಿವರಣೆ ನೀಡಿದ ಕುಲಸಚಿವರು (ಮೌಲ್ಯಮಾಪನ), ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಪ್ರಾರಂಭವಾದ ಸಂದರ್ಭದಲ್ಲಿ, ಸ್ವಾಯತ್ತ ಕಾಲೇಜುಗಳು ಒಳಗೊಂಡಂತೆ 232 ಕಾಲೇಜುಗಳು ಈ ವಿಶ್ವವಿದ್ಯಾನಿಲಯಕ್ಕೆ ವರ್ಗಾವಣೆಯಾಗಿ ಬಂದಿರುತ್ತವೆ. ಆರಂಭಿಕ ಹಂತದಲ್ಲಿ ಸ್ವಾಯತ್ತ ಕಾಳೇಜುಗಳ ವಾರ್ಷಿಕ ಸಮೀಕ್ಷೆ ನಡೆದಿರುವುದಿಲ್ಲ, ಇದಲ್ಲದೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪೂರಕ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೂ ಪದವಿ ಪ್ರಮಾಣ ಪತ್ರ ಪ್ರದಾನ ಮಾಡಿಕೊಂಡು ಬರಲಾಗಿದೆ. ಇತ್ತೀಚಿಗೆ ಸ್ವಾಯತ್ತ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ ತಿಳುವಳಿಕೆ ನೀಡಿ, ಪೂರಕ ಪರೀಕ್ಷೆಗಳನ್ನು ನಡೆಸುವುದನ್ನು ನಿಲ್ಲಿಸಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪಾಲಿಸುತ್ತಿದ್ದ ಪದ್ಧತಿಯನ್ನು ಅನುಸರಿಸಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ದಪಡಿಸಲಾಗಿದೆ ಎಂದು ತಿಳಿಸಿದರು.

ಸ್ವಾಯತ್ತ ಮಹಾವಿದ್ಯಾಲಯಗಳ ಮಾನ್ಯತೆ ನವೀಕರಣ ಒಂದು ತಾಂತ್ರಿಕ ಪ್ರಕ್ರಿಯೆ, ಮಾನ್ಯತೆ ನವೀಕರಣಕ್ಕೆ ನಿಗದಿತ ದಿನಾಂಕದಿಂದ ಪೂರ್ವಾನ್ವಯವಾಗಿ ಜಾರಿಗೊಳಿಸುತ್ತಾರೆ. ಕಾರಣ ಪರಿಗಣಿಸಬಹುದು ಎಂದು ಹೇಳಿದರು.

ಮಾನ್ಯ ಕುಲಪತಿಗಳು ಗೌರವ ಡಾಕ್ಟರೇಟ್ ಪದವಿಗಳಿಗಾಗಿ ಗಣ್ಯರ ಹೆಸರಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ರಚಿಸಲಾದ ಪರಿಣಿತರ ಪರಿಶೀಲಾನ ಸಮಿತಿ ಸಲ್ಲಿಸಿದ ಶಿಫಾರಸ್ಸುಗಳನ್ನು ಪರಿಶೀಲಿಸಿ ಗೌರವಾನ್ವಿತ ಕುಲಾಧಿಪತಿಗಳು ಒಪ್ಪಿಗೆ ನೀಡಿದ್ದು, ಹೆಸರಗಳನ್ನು ಬಹಿರಂಗಗೊಳಿಸಿದರೆ ಅನಗತ್ಯ ಗೊಂದಲವಾಗಬಹುದೆಂಬ ಸಂದಿಗ್ದತೆಯಿಂದಾಗಿ ಹೆಸರುಗಳನ್ನು ಬಹಿರಂಗಗೊಳಿಸಿರುವದಿಲ್ಲವೆಂದು ತಿಳಿಸಿ, ಸದಸ್ಯರು ಗೌಪ್ಯತೆಯನ್ನು ಕಾಪಾಡುತ್ತಾರೆಂಬ ಭರವಸೆಯನ್ನು ಹೊಂದಿ ಕೆಳಗೆ ನಮೂದಿಸಿದ ಮೂರು ಗಣ್ಯರ ಹೆಸರುಗಳನ್ನು ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲು ಗೌರವಾನ್ವಿತ ಕುಲಾಧಿಪತಿಗಳು ಅನುಮೋದನೆ ನೀಡಿರುವುದನ್ನು ಸಭೆಗೆ ತಿಳಿಸಿದರು.

1) ಶ್ರೀ ಎಂ. ಆರ್. ಜೈಶಂಕರ್ – ಡಿ.ಲಿಟ್. ಗೌರವ ಡಾಕ್ಟರೇಟ್– ಸಮಾಜ ಸೇವೆಯಲ್ಲಿ ಗಣನೀಯ ಸಾಧನೆ
2) ಶ್ರೀ ವಿ. ರವಿಚಂದ್ರನ್ – ಡಿ.ಲಿಟ್. ಗೌರವ ಡಾಕ್ಟರೇಟ್– ಚಿತ್ರರಂಗದಲ್ಲಿ ಗಣನೀಯ ಸಾಧನೆ
3) ಡಾ. ಸತ್ಯನಾರಾಯಣ – ಡಿ.ಎಸ್ಸಿ. ಗೌರವ ಡಾಕ್ಟರೇಟ್– ವೈದ್ಯಕೀಯ ರಂಗದಲ್ಲಿ ಗಣನೀಯ ಸಾಧನೆ

ನಿರ್ಣಯ:

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಥಮ ಘಟಿಕೋತ್ಸವದಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ, ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ವಿವಿಧ ಪದವಿಗಳನ್ನು ಸ್ವೀಕರಿಸಲು ಅರ್ಹರಾದ ಅಭ್ಯರ್ಥಿಗಳ ಪಟ್ಟಿಗೆ ಸರ್ವಾನುಮತದ ಅನುಮೋದನೆ ನೀಡಲು ತೀರ್ಮಾನಿಸಲಾಯಿತು.

ಕುಲಾಧಿಪತಿಗಳ ಅನುಮೋದಿಸಿದ ಕೆಳಗೆ ನಮೂದಿಸಿದ ಗಣ್ಯರಿಗೆ ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ನೀಡಲು ಸಭೆ ಅನುಮೋದನೆ ನೀಡಿತು.

1) ಶ್ರೀ ಎಂ. ಆರ್. ಜೈಶಂಕರ್ – ಡಿ.ಲಿಟ್. ಗೌರವ ಡಾಕ್ಟರೇಟ್– ಸಮಾಜ ಸೇವೆಯಲ್ಲಿ ಗಣನೀಯ ಸಾಧನೆ
2) ಶ್ರೀ ವಿ. ರವಿಚಂದ್ರನ್ – ಡಿ.ಲಿಟ್. ಗೌರವ ಡಾಕ್ಟರೇಟ್– ಚಿತ್ರರಂಗದಲ್ಲಿ ಗಣನೀಯ ಸಾಧನೆ
3) ಡಾ. ಸತ್ಯನಾರಾಯಣ – ಡಿ.ಎಸ್ಸಿ. ಗೌರವ ಡಾಕ್ಟರೇಟ್– ವೈದ್ಯಕೀಯ ರಂಗದಲ್ಲಿ ಗಣನೀಯ ಸಾಧನೆ

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/–
ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

ಸಹಿ/–
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ